# ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 06/03/2021 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮುಕ್ಷಮದಲ್ಲಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು,

1. ಹಿಂದಿನ ಸಭೆಯಲ್ಲಿ (ದಿನಾಂಕ: 22-01-2021) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡಲಾಗುತ್ತಿದೆ. ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ. ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ. ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

   ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಹಿರಿಯ/ ಕಿರಿಯ ಆರೋಗ್ಯ ಪರಿವೀಕ್ಷಕರು

3. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ದುರಸ್ತಿಯಾಗದಿರುವ ಬಗ್ಗೆ ಹಾಗೂ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದ್ದು, ಈ ಕುರಿತು ಅಗತ್ಯ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   ಕ್ರಮ: ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

4. ಕಂದಾಯ ವಸೂಲಿಗಾರರು ಹಾಗೂ ಕಂದಾಯ ಪರಿವೀಕ್ಷಕರುಗಳು ವಾರ್ಡ್ ಕಛೇರಿಯಲ್ಲಿ ಸಾರ್ವಜನಿಕರ ಸಂಪರ್ಕಕ್ಕೆ ಸಿಗುತ್ತಿಲ್ಲವೆಂದು ದೂರಿದ್ದು, ಈ ಕುರಿತು ಸಂಬಂಧಪಟ್ಟ ಕಂದಾಯ ವಸೂಲಿಗಾರರು ಹಾಗೂ ಕಂದಾಯ ಪರಿವೀಕ್ಷಕರುಗಳು ವಾರ್ಡ್ ಕಛೇರಿಯಲ್ಲಿ ಇದ್ದು, ಸಾರ್ವಜನಿಕರ ದೂರಿಗಳಿಗೆ ಸ್ಪಂದಿಸಿ, ಸಮಪರ್ಕವಾಗಿ ಕೆಲಸ ನಿರ್ವಹಿಸುವಂತೆ ನೋಡಲ್ ಅಧಿಕಾರಿ ರವರು ಕಂದಾಯ ವಸೂಲಿಗಾರು, ವೈಟ್‌ಫೀಲ್ಡ್ ಉಪವಲಯ ರವರಿಗೆ ಸೂಚಿದರು.

   ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

5. ದಿನ್ನೂರು, ಚನ್ನಸಂದ್ರ, ಮತ್ತು ರಾಮೇಗೌಡನಗರ ಗ್ರಾಮಗಳಲ್ಲಿ ಹಾಗೂ ವಾರ್ಡ್ ವ್ಯಾಪ್ತಿಯ ಬಹುತೇಕ ಪ್ರದೇಶದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿ ಕೈಗೊಂಡಿದ್ದು ಇದರಿಂದ ಅಲ್ಲಿರುವ ರಸ್ತೆಗಳು ಹಾಗೂ ಹಾಲಿ ಇರುವ ಕುಡಿಯುವ ನೀರಿನ ಪೈಪ್‌ಲೈನ್‌ಗಳು ಸಂಪೂರ್ಣ ಹಾಳಾಗದ್ದು, ಸದರಿ ರಸ್ತೆಗಳನ್ನು ಸರಿಯಾಗಿ ದುರಸ್ತಿಗೊಳಿಸಿ, ಹಾಲಿ ಇರುವ ಕುಡಿಯುವ ನೀರಿನ ಪೈಪ್ ಲೈನ್‌ಗಳನ್ನು ಸರಿಪಡಿಸಲು ಗ್ರಾಮಸ್ಥರು ಕೋರಿದ್ದು, ಈ ಕುರಿತು ಅಗತ್ಯ ಕ್ರಮ ವಹಿಸುವಂತೆ ವಾರ್ಡ್ ನೋಡಲ್ ಅಧಿಕಾರಿ, ರವರಿಗೆ ತಿಳಿಸಿರುತ್ತಾರೆ.

   ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ/ವಾರ್ಡ್ ಅಭಿಯಂತರರು

6. ಕಾಡುಗುಡಿ ವಾರ್ಡ್ ವ್ಯಾಪ್ತಿಯ ಪಟ್ಟಂದೂರು ಅಗ್ರಹಾರ ಸರ್ವೆ ನಂ.42ರ ಜಾಗವನ್ನು ಈ ಹಿಂದೆ ಆಶ್ರಯ ಯೋಜನೆಯಡಿ ಹಸ್ತಾಂತರಿಸಿದ್ದು ಸದರಿ ಜಮೀನನ್ನು ಎ.ಡಿ.ಎಲ್.ಆರ್ ರವರು ಸರ್ವೆ ಮಾಡಿ, ಗುರುತಿಸಿ ಕೊಡಲು ಕಂದಾಯ ಇಲಾಖೆ, ರವರಿಗೆ ನೋಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಕಂದಾಯ ಇಲಾಖೆ, ಕೆ.ಆರ್.ಪುರಂ

7. ಅಂಬೇಡ್ಕರ್ ಗುಟ್ಟ, ದಿನ್ನೂರು, ಗರುಡಾ ಅಪಾರ್ಟ್‌ಮೆಂಟ್ ರಸ್ತೆಗಳಲ್ಲಿ ವಿದ್ಯುತ್ ಸಮಸ್ಯೆ ಇದ್ದು, ಇದನ್ನು ಸರಿಪಡಿಸಲು ಮತ್ತು ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು, ಶಂಕರಾಪುರ ಗ್ರಾಮದಲ್ಲಿ ವಿದ್ಯುತ್ ಕಂಬದಲ್ಲಿ ಸುರಕ್ಷತೆ ಕ್ರಮಗಳನ್ನು ಅಳವಡಿಸಲು ಹಾಗೂ ಎ.ಕೆ.ಜಿ ಕಾಲೋನಿಯಲ್ಲಿ ಹೊಸದಾಗಿ ವಿದ್ಯುತ್ ಕಂಬವನ್ನು ಅಳವಡಿಸಲು, ಚನ್ನಸಂದ್ರ ಗ್ರಾಮದಲ್ಲಿ Secondary Line ಅಳವಡಿಸಲು, ಪಟಾಲಮ್ಮ ಬಡಾವಣೆಯ 2ನೇ ಅಡ್ಡ ರಸ್ತೆ ನಡುರಸ್ತೆಯಲ್ಲಿ ಇರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದ್ದು ಈ ಕುರಿತು ಅಗತ್ಯ ಕ್ರಮ ವಹಿಸುವಂತೆ ಬೆಸ್ಕಾಂ ಇಲಾಖೆ ರವರಿಗೆ ನೋಡಲ್ ಅಧಿಕಾರಿ, ರವರು ಸೂಚಿಸಿರುತ್ತಾರೆ.

ಕ್ರಮ: ಸ.ಕಾ.ಅ (ಬೆಸ್ಕಾಂ)

8. ಕೋಳಿ ಅಂಗಡಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ಈಗ ರಾಜಕಾಲುವೆಗಳಿಗೆ ಚೆಲ್ಲುತ್ತಿದ್ದಾರೆ. ಈ ಬಗ್ಗೆ ಪಶು ವೈಧ್ಯಾಧಿಕಾರಿಗಳು ಇದನ್ನು ತಡೆಯವ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

ಕ್ರಮ: ಪಶುವೈಧ್ಯಾಧಿಕಾರಿಗಳು

9. ಹೊಸದಾಗಿ ಯು.ಜಿ.ಡಿ ಅಳವಡಿಸಿರುವ ರಸ್ತೆಗಳಲ್ಲಿ ರಿಸೀವಿಂಗ್ ಛೇಂಬರ್ ಅಳವಡಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

ಕ್ರಮ: ಮಂಜುನಾಥ್, ಸ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಪ್ರಾಜೇಕ್ಟ್)

10. ಒಂಟಿ ಮನೆಗಳಿಗೆ ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ಮತ್ತು ವರದಿ ನೀಡಲು ಸಹಾಯಕ ಕಂದಾಯ ಅಧಿಕಾರಿಗಳು ಬಿಬಿಎಂಪಿ ಇವರಿಗೆ ವರ್ಗಾಹಿಸಲಾಗಿದೆ.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಲಯ

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೆ.ಎಸ್.ಸ್ವಾಮಿ)
**ಸಹಾಯಕ ಅಭಿಯಂತರರು ಹಾಗೂ**
**ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ